ಒದಗುತ್ತದೆ. ನಮ್ಮನ್ನು ನಾವು ಸ್ಪಷ್ಟಪಡಿಸಿಕೊಳ್ಳುವ ಅವಕಾಶ ಲಭಿಸುತ್ತದೆ. ಹರಿವ ನದಿ ತಿರುವಿನಲ್ಲಿ ಹಾದಾಗಲೇ ತನ್ನನ್ನು ತಾನು ಹಸನುಗೊಳಿಸಿಕೊಳ್ಳಲು ಸಾಧ್ಯ. ಯಾವುದೇ ಸಾಹಿತ್ಯಕಲೆಗಳ ವಲಯ ಈ ಸ್ವಸಂಘರ್ಷಕ್ಕೆ ಒಳಗಾಗಲೇಬೇಕು.

ಆದರೆ ಇತ್ತೀಚಿನ ದಶಕಗಳಲ್ಲಿ ಹೆಚ್ಚಳವಾಗುತ್ತಿರುವ ಸಾಹಿತ್ಯ ಸಮಾವೇಶಗಳ ಕಾರಣ ಇಷ್ಟು ಸರಳವಾಗಿಲ್ಲ. ಸಾಹಿತ್ಯವು ಸಂಸ್ಕೃತಿಯ ಸಮರ್ಥ ವಕ್ತಾರವಾಗಿರುತ್ತದೆ ಮತ್ತು ಸಮಕಾಲೀನ ವಿದ್ಯಮಾನಗಳನ್ನು ಪ್ರಭಾವಿಸುವಷ್ಟು ಶಕ್ತಿಶಾಲಿಯಾಗಿರುತ್ತದೆ. ಸಮಾಜೋ ಆರ್ಥಿಕವಾದ ಎಲ್ಲ ಸಂಗತಿಗಳೊಂದಿಗೆ ಅದರದ್ದು ಸಾವಯವ ಸಂಬಂಧ. ಅದು ಕಾಲದ ಕಥನವೂ ಹೌದು. ಮೌಲ್ಯಮಾಪಕವೂ ಹೌದು. ಹಾಗಾಗಿ ಎಂದಿನಿಂದಲೂ ಅಧಿಕಾರ ರಾಜಕಾರಣವು ಕಲೆ–ಸಾಹಿತ್ಯಗಳನ್ನು ತನ್ನ ಸುಪರ್ದಿಯಲ್ಲಿಟ್ಟುಕೊಂಡಿರಲು ಬಯಸುತ್ತದೆ. ಅದರಲ್ಲೂ ಮನುಷ್ಯ ಬದುಕನ್ನು ಒಡೆದು ಆಳಬೇಕಾದ ರಾಜಕೀಯ ದುರಂತದಲ್ಲಿ, ಹಿಂಸಾರತಿಯನ್ನು ವ್ಯಕ್ತಿಪ್ರಜ್ಞೆಗೆ ಆಮದಾಗಿಸಲು ಸಾಹಿತ್ಯ ತಡೆಯೊಡ್ಡುತ್ತದೆ. ಆಗ ಸಾಹಿತ್ಯ ಕಲೆಗಳನ್ನು ಕೊಂಡುಕೊಳ್ಳುವುದು, ಕೊಳೆಯಿಸುವುದು, ಒತ್ತುವರಿ ಮಾಡುವುದು, ಮರೆವಿಗೆ ತಳ್ಳುವುದನ್ನು ನಡೆಸುತ್ತಿರುತ್ತದೆ. ಅದರಲ್ಲೂ ಇತ್ತೀಚಿನ ದಶಕಗಳಲ್ಲಿ ಬಂಡವಾಳವಾದ ಮತ್ತು ಕೋಮುವಾದಗಳು ಅಧಿಕಾರ ರಾಜಕಾರಣದ ಎರಡು ಪಾದಗಳಾಗುತ್ತಿರುವಾಗ, ಸಹಜವಾಗಿಯೇ ಕಲೆ–ಸಾಹಿತ್ಯ ಪೋಷಣೆಯ ಪ್ರಕ್ರಿಯೆಗಳು ಹೆಚ್ಚಿವೆ. ಹಂಪಿ ಉತ್ಸವ ನಡೆಸುವ–ಬಿಡುವ ಚರ್ಚೆ ಯಾವೆಲ್ಲ ರೂಪದ ಪ್ರತಿಭಟನೆಯನ್ನು ಪಡೆಯಿತು ಎಂಬುದನ್ನು ಗಮನಿಸಿದರೆ ಉತ್ಸವಗಳಿಗಿರುವ ಅಪ್ಪಟ ರಾಜಕೀಯ ನಂಟು ಕಾಣುತ್ತದೆ.

ಇತ್ತೀಚೆಗೆ ರಾಜಕೀಯ ಪಕ್ಷಗಳು ಸಾಹಿತ್ಯ–ಕಲೆಯ ವಲಯದ ಸಂಘಟನೆಗಳಲ್ಲಿ, ಸಂಘ–ಸಂಸ್ಥೆಗಳ ಚುನಾವಣೆಗಳಲ್ಲಿ ಫ್ರಾಕ್ಸಿ ಮುಖವಾಡದಿಂದ ಪ್ರವೇಶಿಸುತ್ತಿರುವ ರಭಸವನ್ನು ಗಮನಿಸಬೇಕು. ಅಲ್ಲಿ ರಾಜಕೀಯ ಅಜೆಂಡಾ ಬಣ್ಣಬದಲಿಯಾಗಿ ಜಾರಿಯಾಗುತ್ತದೆ. ಜನರು ಕಟ್ಟಿಕೊಂಡು ಸಮರಸದ ಬಾಳನ್ನು ಕದಡುವ ಸ್ವಹಿತದ ಸಂದರ್ಭದಲ್ಲಿಯಂತೂ, ಬಹುಸಾಧ್ಯತೆಗಳಲ್ಲಿ ಈ ಸಾಂಸ್ಕೃತಿಕ ದಾಳಿ ನಡೆಯುತ್ತದೆ. ಊರುಕೇರಿಗಳ ಕಬಡ್ಡಿ ಟೂರ್ನಮೆಂಟಿನಿಂದ ಹಿಡಿದು, ಸಿನಿಮೋತ್ಸವದವರೆಗೂ ರಾಜಕೀಯ ಭಾಗೀದಾರಿಕೆಯಿರುತ್ತದೆ. ಹಾಗಾಗಿ, ಸದ್ಯ ಕನ್ನಡದಲ್ಲಿ ನಡೆಯುತ್ತಿರುವ ಸಮಾವೇಶಗಳ ಭರಾಟೆಯನ್ನು ವ್ಯವಧಾನದಿಂದ ನೋಡಬೇಕಿದೆ.

ಈ ಎಲ್ಲವೂ ಒಂದೇ ಉದ್ದೇಶದಿಂದಾಗಲೀ ಒಂದೇ ಸ್ವರೂಪದಿಂದಾಗಲೀ ರೂಪಿತಗೊಂಡಿಲ್ಲ. ಇವುಗಳಲ್ಲಿ ಮೂರು ಪ್ರತ್ಯೇಕ ಪ್ರಕ್ರಿಯೆಗಳು ಇವೆ. ಅದರಲ್ಲೂ ಸಂಭ್ರಮ, ಸಿರಿ, ಹಬ್ಬಗಳಿಗೂ; ಜನನುಡಿ, ಜನಸಾಹಿತ್ಯಗಳಿಗೂ ವಿರುದ್ಧ ಧಾರೆಗಳಿವೆ. ಸಂಭ್ರಮ, ಸಿರಿಗಳು, ಸಾಹಿತ್ಯವನ್ನು ಬಂಡವಾಳಗಾರರ ಖಾಸಗಿ ಚಾನಲ್‌ನಂತೆ ಬಳಸುತ್ತಿವೆ. ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣ, ಸಾಹಿತ್ಯೇತರ ಕಾರಣಗಳಿಂದ ನಡೆವ ವ್ಯಕ್ತಿ ವೈಭವೀಕರಣ, ಶುದ್ಧ ಸಾಹಿತ್ಯದ ಹೆಸರಿನಲ್ಲಿ ಸಾಹಿತ್ಯದ ಸಾಮಾಜಿಕ ಬದ್ಧತೆಯನ್ನು ನಗಣ್ಯಗೊಳಿಸುವ ವ್ಯವಸ್ಥಿತ ರಾಜಕಾರಣ, ಸಾಹಿತ್ಯವನ್ನು 'ಉತ್ತಮ ಸರಕಿದು ಅತಿಲಾಭ ಬರುವಂಥ' ಎಂಬ ಧೋರಣೆಗಳಿವೆ ಎಂಬ ಆರೋಪಗಳು ಕೇಳಿಬಂದವು. ಧರ್ಮವನ್ನು ಮತೀಯ ಮೌಢ್ಯದ ಹೊಂಡವಾಗಿಸಿದಂತೆ ಕಲೆ–ಸಾಹಿತ್ಯಗಳನ್ನು ಕಾವಲು ನಾಯಿಗಳಂತೆ ಪಳಗಿಸಲಾಗುತ್ತಿದೆ ಮತ್ತು ಜಗತ್ತಿನ ಚರಿತ್ರೆಯಲ್ಲದಕ್ಕೆ ಸಬೂಬುಗಳಿವೆ ಎಂಬ ಆತಂಕದಲ್ಲಿ ಸಾಹಿತ್ಯಕ್ಕೂ ಜನಬದುಕಿಗೂ ಇರುವ ಕರುಳ ಸಂಬಂಧವನ್ನು ಆಧರಿಸಿದ ಸಮಾವೇಶಗಳು ನಡೆಯತೊಡಗಿದವು. ಈ ಎರಡೂ ಪ್ರತ್ಯೇಕ ನಡೆಗಳು. ಚರ್ಚಿತವಾಗುವ ವಿಷಯಗಳು, ನಡೆವ ವಿಧಾನ, ಸಂಪನ್ಮೂಲ ವ್ಯಕ್ತಿಗಳು, ಪಾಲುದಾರರಾಗುವವರು, ಕಡೆಗೆ ಉಣ್ಣುವ ಊಟದಲ್ಲೂ ಸ್ಪಷ್ಟ ವ್ಯತ್ಯಾಸವಿದೆ. ಸಾಹಿತ್ಯ